**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ**

**ದಂಡಾಧಿಕಾರಿಗಳವರ ನ್ಯಾಯಾಲಯ, ಬೈಲಹೊಂಗಲ**

**ಸಿ.ಸಿ. ನಂ.1202/2025**

**ಚಾ.ಸಾ. - 1**
**ಪ್ರಾ.ಸಾ. - 1**

**ಸಾಕ್ಷಿದಾರರ ಹೆಸರು** : ಜೀನಪ್ಪ ಅರ್ಜುನ ಕುರಕುರೆ

**ಸಾಕ್ಷಿದಾರರ ವಯಸ್ಸು** : 42 ವರ್ಷ

**ಸಾಕ್ಷಿದಾರರ ಉದ್ಯೋಗ** : ಶೇತ್ಕಿ

**ಸಾಕ್ಷಿದಾರರ ವಿಳಾಸ** : ಕಲಭಾವಿ, ಕಿತ್ತೂರು

---

**ಪ್ರಮಾಣ ವಚನ ಮಾಡಿದ ದಿನಾಂಕ : 16.03.2026.**

**ಮುಖ್ಯ ವಿಚಾರಣೆ: ಎಪಿಪಿ ಅವರಿಂದ:**

ಚಾಸಾ 7 ನನ್ನ ತಂದೆಯಾಗಬೇಕು. ಚಾಸಾ 2 ಮತ್ತು 3ರವರ ಪರಿಚಯ ಇರುತ್ತದೆ. ದಿನಾಂಕ 27.03.2025 ರಂದು ಚಾಸಾ 7 ರವರು ನಮ್ಮ ಹೊಲದ ಚಿಕ್ಕು ಹಣ್ಣಗಳನ್ನು ಮಾರಾಟ ಮಾಡಲು ಸಂಗೊಳ್ಳಿಗೆ ಹೋಗಿ ಬರುತ್ತೇನೆ ಎಂದು ಹೇಳಿರುತ್ತಾರೆ. ನಂತರ ಸುಮಾರು 11.30 ಗಂಟೆಗೆ ಚಾಸಾ 6 ರವರು ನನಗೆ ಕರೆ ಮಾಡಿ ಬೆಳಿಗ್ಗೆ 09.30 ಗಂಟೆಯ ಸಮಯದಲ್ಲಿ ಸಂಗೊಳ್ಳಿ ಗ್ರಾಮದ ಬಸ್ಸ ನಿಲ್ದಾಣದ ಹತ್ತಿರ ಸಂಗೊಳ್ಳಿ ಗುಡದೂರ ರಸ್ತೆಯ ಬಾಜು ಆರೋಪಿಯು ನಡೆಸುತ್ತಿದ್ದ ಕೆ ಎಸ್ ಆರ್ ಟಿ ಸಿ ಬಸ್ಸ ನೇದ್ದನ್ನು ನಿಲ್ಲಿಸಿದ್ದು ಆಗ ಚಾಸಾ ನಂ.7 ಬಸ್ಸ ಇಳಿಯುತ್ತಿರುವಾಗ ಆರೋಪಿಯು ತಾನು ನಡೆಸುತ್ತಿದ್ದ ಕೆ ಎಸ್ ಆರ್ ಟಿ ಸಿ ಬಸ್ಸವನ್ನು ಅತೀ ವೇಗವಾಗಿ, ನಿಷ್ಕಾಳಜಿತನದಿಂದ ಒಮ್ಮೆಲೇ ಬಸ್ಸವನ್ನು ಚಲಾಯಿಸಿ ಚಾಸಾ ನಂ.7 ಇವರಿಗೆ ಬಸ್ಸನಿಂದಾ ಕೆಳಗೆ ಕೆಡವಿರುತ್ತಾರೆ. ಅದರಿಂದ ಅವರ ಎಡಗಡೆ ಚಪ್ಪಿಗೆ ಭಾರಿ ಗಾಯಪಡಿಸಿರುತ್ತಾರೆ. ತಕ್ಷಣವೇ ನಾನು ಅಲ್ಲಿಗೆ ಬೈಕನಲ್ಲಿ ಹೋಗಿರುತ್ತೇನೆ. ಅಲ್ಲಿಂದ ಅವರನ್ನು ಖಾಸಗಿ ವಾಹನದಲ್ಲಿ ಸಂಗೊಳ್ಳಿಯ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕರೆದುಕೊಂಡು ಹೋಗಿ ಅಲ್ಲಿಂದ ಅಂಬುಲೇನ್ಸನಲ್ಲಿ ಬೈಲಹೊಂಗಲ ಸರ್ಕಾರಿ ಆಸ್ಪತ್ರೆಗೆ ದಾಖಲು ಮಾಡಿ ಅಲ್ಲಿಂದ ಬೆಳಗಾವಿಯ ವಿಜಯ ಆಸ್ಪತ್ರೆಗೆ ದಾಖಲು ಮಾಡಿರುತ್ತೇವೆ. ಬಸ ಹೋದ ಬಳಿಕ ನಾನು ಘಟನಾ ಸ್ಥಳಕ್ಕೆ ಹೋದ ಕಾರಣ ಆರೋಪಿಯನ್ನು ನೋಡಿ ಗುರುತಿಸಲಾರೆನು.

ತದನಂತರ ನಾನು ಬೈಲಹೊಂಗಲ ಪೊಲೀಸ ಠಾಣೆಗೆ ಹೋಗಿ ಆರೋಪಿಯ ವಿರುದ್ದ ದೂರು ನೀಡಿರುತ್ತೇನೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು, ಸಾಕ್ಷಿ ಸದರಿ ದಾಖಲೆಯಲ್ಲಿರುವ ತನ್ನ

ಹೆಬ್ಬಟ್ಟಿನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆ ದೂರಾಗಿದ್ದು, ಸದರಿ ದಾಖಲೆಯನ್ನು ನಿಶಾನೆ ಪಿ 1 ಎಂದು ಸಾಕ್ಷಿಯ ಸಹಿಯನ್ನು ನಿಶಾನೆ ಪಿ 1ಎ ಎಂದು ಗುರುತಿಸಲಾಯಿತು. ಚಿಕಿತ್ಸೆಯನ್ನು ಪಡೆದುಕೊಂಡು ಹೋಗಿ ದೂರನ್ನು ನೀಡಲು ತಡವಾಗಿರುತ್ತದೆ.

ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಿದ್ದು, ಸದರಿ ದಾಖಲೆಯು ಸ್ಥಳಪಂಚನಾಮೆಯಾಗಿದ್ದು, ಅದನ್ನು ನಿಶಾನೆ ಪಿ 2 ಎಂದು ಸಾಕ್ಷಿಯ ಸಹಿಯನ್ನು ನಿಶಾನೆ ಪಿ 2ಎ ಎಂದು ಗುರುತಿಸಲಾಯಿತು. ಅದೇ ದಿನ ಸ್ಥಳಪಂಚನಾಮೆಯನ್ನು ನನ್ನ ಹಾಗೂ ಇನ್ನಿಬ್ಬರ ಸಮಕ್ಷಮ ಅಪಘಾತದ ಸಂಬಂಧ ಮಧ್ಯಾಹ್ನ 01.00 ರಿಂದ 02.00 ಗಂಟೆವರೆಗೆ ಪೊಲೀಸರು ಜರುಗಿಸಿರುತ್ತಾರೆ. ಹಾಗೂ ಹಾಥ ನಕಾಶೆಯನ್ನು ತಯಾರಿಸಿರುತ್ತಾರೆ. ಸದರಿ ದಾಖಲೆಯು ಹಾಥನಕಾಶೆಯಾಗಿದ್ದು, ಅದನ್ನು ನಿಶಾನೆ ಪಿ 3 ಎಂದು ಸಾಕ್ಷಿಯ ಸಹಿಯನ್ನು ನಿಶಾನೆ ಪಿ 3ಎ ಎಂದು ಗುರುತಿಸಲಾಯಿತು. ಅದೇ ಕಾಲಕ್ಕೆ 2 ಪೋಟೋಗಳನ್ನು ತೆಗೆದಿರುತ್ತಾರೆ. ಸದರಿ ಪೋಟೋಗಳನ್ನು ನಿಶಾನೆ ಪಿ 4 ಮತ್ತು 5 ಎಂದು ಅವುಗಳಿಗೆ ಸಂಬಂಧಿಸಿದ 65ಬಿ ಪ್ರಮಾಣ ಪತ್ರವನ್ನು ನಿಶಾನೆ ಪಿ 6 ಎಂದು ಗುರುತಿಸಲಾಗಿದೆ. ನಾನು ಯಾವುದೇ ಮರುಹೇಳಿಕೆಯನ್ನು ನೀಡಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಕೇಸಿಗೆ ವ್ಯತಿರಿಕ್ತವಾಗಿ ಸಾಕ್ಷಿ ನುಡಿದಿರುವ ಕಾರಣ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ವಾಟೀ ಸವಾಲು ಮಾಡಲು ಅವಕಾಶ ನೀಡಬೇಕೆಂದು ಎಪಿಪಿರವರು ಕೇಳಿಕೊಂಡಿದ್ದು ಕಡತವನ್ನು ಪರಿಶೀಲಿಸಲಾಗಿ ಸಾಕ್ಷಿಯು ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದಿರುವುದು ಕಂಡು ಬಂದ ಕಾರಣ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ವಾಟೀಸವಾಲು ಮಾಡಲು ಎಪಿಪಿ ರವರಿಗೆ ಅವಕಾಶ ನೀಡಲಾಯಿತು.)**

**ವಾಟೀ ಸವಾಲುಃ ಮಾನ್ಯ ಎ ಪಿ ಪಿ ರವರಿಂದಃ**

ದಿನಾಂಕ 27.03.2025 ರಂದು 09.40 ಗಂಟೆಗೆ ಚಾಸಾ 6 ರವರು ಕರೆ ಮಾಡಿರುತ್ತಾರೆ ಎಂದರೆ ಸರಿ. ಚಾಸಾ 7 ರವರು ಕೆಳಗೆ ಬಿದ್ದ ಬಳಿಕ ಬಸನಲ್ಲಿದ್ದ ಪ್ರಯಾಣಿಕರು ಬಾಯಿ ಮಾಡಿದ ಕಾರಣ ಬಸ್ಸನ್ನು ನಿಲ್ಲಿಸಿರುತ್ತಾರೆ ಎಂದು ಸಹ ತಿಳಿಸಿರುತ್ತಾರೆ ಎಂದರೆ ಸರಿ. ಬಸ್ಸ ನಂಬರ ಕೆಎ 23 ಎಫ್ 0698 ಆಗಿರುತ್ತದೆ ಎಂದರೆ ಸರಿ. ಆರೋಪಿಯ ಹೆಸರು ಪ್ರಕಾಶ ವಿರನಗೌಡ ಪರವತಗೌಡ ಸಾಃ ಚಿವಟಗುಂಡಿ ಎಂದು ತಿಳಿಸಿರುತ್ತಾರೆ ಎಂದರೆ ಸರಿ.

ದಿನಾಂಕ 30.03.2025 ರಂದು ಬೆಳಿಗ್ಗೆ 10.00 ರಿಂದ 11.00 ಗಂಟೆ ವರೆಗೆ ಚಾಸಾ 2 ಮತ್ತು 3 ರವರ ಸಮಕ್ಷಮ ಘಟನಾ ಸ್ಥಳ ಪಂಚನಾಮೆಯನ್ನು ಜರುಗಿಸಿರುತ್ತಾರೆ ಎಂದರೆ ಸರಿ. ಅದೇ ದಿನ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿ. ನ್ಯಾಯಾಲಯದ ಮುಂದೆ ಇರುವ ಆರೋಪಿಯೇ ಅಪಘಾತವನ್ನು ಪಡಿಸಿರುತ್ತಾರೆ ಎಂದರೆ ಸರಿ.

**<u>ವಾಟೀ ಸವಾಲುಃ  ಆರೋಪಿ ಪರ ಶ್ರೀ ಡಿ ಎಸ್ ಬಿ ವಕೀಲರು ವಾಟೀ ಸವಾಲಿಗೆ ಸಮಯ ಕೊರಿದ್ದು ನೀಡಲಾಯಿತು.</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ.**

ಪ್ರ.ದಿ.ನ್ಯಾ. ಮತ್ತು ಪ್ರ.ದ.ನ್ಯಾ..ದಂ.ನ್ಯಾ..ಬೈಲಹೊಂಗಲ